# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ. 1045/2020

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| **ಹೆಸರು** | : | ಸುರೇಶಪ್ಪ ಅಲಿಯಾಸ್ ನಾಗರಾಜ | ಚಾಸಾಃ **4** | ಪ್ರಾಸಾಃ **3** |
| **ತಂದೆಯ ಹೆಸರು** | : | ಹನುಮಂತಪ್ಪ | | |
| **ವಯಸ್ಸು** | : | 52 ವರ್ಷ | | |
| **ವೃತ್ತಿ** | : | ವ್ಯವಸಾಯ | | |
| **ವಾಸಸ್ಥಳ** | : | ಹಿರೇಹಾಲಿವಾಣ | | |

ದಿನಾಂಕಃ **24-01-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

1 ನೇ ಆರೋಪಿ ಗೊತ್ತಿಲ್ಲ. ಚಾಸಾ-1 ರಿಂದ 3 ಗೊತ್ತು.ಮೃತ ಚಂದ್ರಶೇಖರಪ್ಪ ಗೊತ್ತು. ಚಂದ್ರಶೇಖರಪ್ಪ ಮತ್ತು ಚಾಸಾ-1 ರವರಿಗೆ ಈಗ್ಗೆ ಸುಮಾರು 5 ವರ್ಷಗಳ ಹಿಂದೆ ಅಪಘಾತವಾಗಿರುತ್ತದೆ ಮತ್ತು ಅಪಘಾತದಿಂದಾಗಿ ಚಂದ್ರಶೇಖರಪ್ಪರವರು ಮರಣಹೊಂದಿದ್ದು ಚಾಸಾ-1 ರವರಿಗೆ ಗಾಯಗಳಾಗಿರುತ್ತವೆ. ಆದರೆ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂಬ ವಿಚಾರ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ 1 ದಾಖಲೆಗೆ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ಪೊಲೀಸರಿಗೆ ಬರೆದುಕೊಟ್ಟ ಮುಚ್ಚಳಿಕೆಯನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

ಪಾಟೀ ಸವಾಲು :- ಮಾನ್ಯ ಸ.ಸ.ಅ. ರವರಿಂದ:-

ದಿಃ 01-03-2020 ರಂದು ಬೆಳಗ್ಗೆ ನಾನು ಸ್ವಂತ ಕೆಲಸದ ನಿಮಿತ್ತ ಮೋಟಾರ್ ಸೈಕಲ್ ನಲ್ಲಿ ಮಲೇಬೆನ್ನೂರಿಗೆ ಹೋಗುತ್ತಿದ್ದಾಗ ಬೆಳಗ್ಗೆ 11-00 ಗಂಟೆ ಸಮಯದಲ್ಲಿ ಮುರುಗೇಶಪ್ಪ ಮತ್ತು ಗಿರಿಯಪ್ಪರ ರಂಗಪ್ಪ ಎಂಬುವವರ ಭತ್ತದ ಗದ್ದೆಗಳ ಮಧ್ಯೆ ಹಾದುಹೋಗಿರುವ ಯಕ್ಕನಹಳ್ಳಿ/ಚಿಕ್ಕಹಾಲಿವಾಣ ರಸ್ತೆಯಲ್ಲಿ 1 ನೇ ಆರೋಪಿ ಟ್ರ್ಯಾಕ್ಟರ್ ಅನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಕೆಎ-27/ಯು-7274 ಮೋಟಾರ್ ಸೈಕಲ್ ಗೆ ಡಿಕ್ಕಿಪಡಿಸಿದ ಪರಿಣಾಮ ಮೋಟಾರ್ ಸೈಕಲ್ ಚಾಲನೆ ಮಾಡುತ್ತಿದ್ದ ಎಂ ಚಂದ್ರಶೇಖರಪ್ಪರವರಿಗೆ ಎಡಗೈ, ತಲೆಯ ಹಿಂಭಾಗ ಮತ್ತು ಇತರ ಕಡೆ ಪೆಟ್ಟು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದು ಮತ್ತು ಚಾಸಾ-1 ರವರಿಗೆ ಗಾಯಗಳಾಗಿದ್ದು ನಾನು ಮತ್ತು ಚಾಸಾ-2 ಮತ್ತು 3 ರವರು ಚಾಸಾ-1 ರವರನ್ನು ಉಪಚರಿಸಿ ಮತ್ತು ನಾನು ಆಂಬುಲೆನ್ಸ್‌ಗೆ ಫೋನ್ ಮಾಡಿ ತಿಳಿಸಿ ನಂತರ ಚಾಸಾ-1 ರವರನ್ನು ಅವರ ಸಂಬಂಧಿಕರು ಆಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಮತ್ತು ಮೃತ ಎಂ ಚಂದ್ರಶೇಖರಪ್ಪರವರನ್ನು ಮಲೇಬೆನ್ನೂರು ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಮತ್ತು ಚಾಸಾ-1 ರವರಿಗೆ ಮಲೇಬೆನ್ನೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆ ಚಿಗಟೇರಿ ಆಸ್ಪತ್ರೆ ಮತ್ತು ದಾವಣಗೆರೆ ರಾಮಕೃಷ್ಣ ನರ್ಸಿಂಗ್ ಹೋಂ ನಲ್ಲಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದು ಮತ್ತು ಆರೋಪಿಯನ್ನು ಪುನಃ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರಿಗೆ ನಿಪಿ-6 ರಂತೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು :- ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.